# ಒಂಬತ್ತನೆಯ ತರಗತಿ (ದ್ವಿತೀಯ ಭಾಷೆ ಕನ್ನಡ) ‘ಸೇತುಬಂಧ’

ಗೌರವಾನ್ವಿತ ಶಿಕ್ಷಕ ಬಾಂಧವರೆ,

ಸೇತುಬಂಧ ಕಾರ್ಯಕ್ರಮವು ಶಿಕ್ಷಕರಿಗೆ ಚಿರಪರಿಚಿತವಾಗಿದ್ದರೂ ಈ ಸಾಲಿನ ಸೇತುಬಂಧ ನವೀನ ಹಾಗೂ ಸವಾಲಿನಿಂದ ಕೂಡಿದೆ. ಕೋವಿಡ್-19ರ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಶಾಲೆಗಳು ಸಮರ್ಪಕವಾಗಿ ನಡೆದಿಲ್ಲವಾದ ಕಾರಣ ಈ ಸಾಲಿನ ಶೈಕ್ಷಣಿಕ ವರ್ಷದ ಸೇತುಬಂಧ ಕಾರ್ಯಕ್ರಮವು ಶಿಕ್ಷಕರಾದ ನಮಗೆ ಸವಾಲಾಗಿದೆ. ವಿದ್ಯಾರ್ಥಿಗಳು ಆಯಾ ತರಗತಿಯಲ್ಲಿ ಗಳಿಸಬೇಕಾದ ಸಾಮರ್ಥ್ಯವನ್ನು ಗಳಿಸಲು ಕಷ್ಟಸಾಧ್ಯವಾಗಿರುವುದರಿಂದ ಕಲಿಕಾ ಕೊರತೆ ಉಂಟಾಗಿರುತ್ತದೆ.ಇದನ್ನು ಸರಿದೂಗಿಸುವ ನಿಟ್ಟಿನಲ್ಲಿ ಈ ಸಾಹಿತ್ಯವು ಪೂರಕವಾಗಿರುತ್ತದೆ.

ಶಿಕ್ಷಕರು, ಸೇತುಬಂಧ ಸಾಹಿತ್ಯದಲ್ಲಿರುವ ಮೂವತ್ತು ದಿನಗಳ ‘ಬಂಧ’ ಸಾಹಿತ್ಯದಲ್ಲಿ ನೀಡಿರುವ ಸೂಚನೆಯಂತೆ ಚಟುವಟಿಕೆಗಳನ್ನು ನಡೆಸಿ ವಿದ್ಯಾರ್ಥಿಗಳನ್ನು ಸದರಿ ತರಗತಿಗೆ ಸಿದ್ಧಗೊಳಿಸಬೇಕು.

ಈ ಹಂತದ ಬೋಧನಾ ಕಲಿಕಾ ಪ್ರಕ್ರಿಯೆಯು ಶಿಶು ಕೇಂದ್ರಿತ, ಚಟುವಟಿಕೆ ಆಧಾರಿತ ಮತ್ತು ಸಂತಸದಾಯಕ ಕಲಿಕೆಗೆ ಒತ್ತು ನೀಡುವಂತಿರಬೇಕು. ಇದಕ್ಕಾಗಿ ಶಿಕ್ಷಕರು ಉತ್ತಮ ರೀತಿಯಲ್ಲಿ ಪೂರ್ವ ಸಿದ್ಧತೆ ಮಾಡಿಕೊಳ್ಳುವುದು ಅಗತ್ಯ ಮತ್ತು ಅತ್ಯಂತ ಅನಿವಾರ್ಯವಾಗಿದ್ದು ನಿಮ್ಮ ಸೃಜನಶೀಲತೆಗೆ ಪೂರ್ಣ ಅವಕಾಶವಿರುತ್ತದೆ.

- ಸೇತುಬಂಧ ಕಾರ್ಯಕ್ರಮದ ಈ ಸಾಹಿತ್ಯವನ್ನು ಶಿಕ್ಷಕರು ಓದಿ, ಅರ್ಥೈಸಿಕೊಳ್ಳುವುದು.
- ಇಲ್ಲಿನ ಚಟುವಟಿಕೆಗಳು ಕೇವಲ ಮಾದರಿಯಷ್ಟೆ. ಶಿಕ್ಷಕರು ವಿಭಿನ್ನವಾದ ರೀತಿಯಲ್ಲಿ ಸೃಜನಾತ್ಮಕವಾಗಿ ಚಟುವಟಿಕೆಗಳನ್ನು ರೂಪಿಸಿಕೊಳ್ಳುವುದು.
- ಒಂಬತ್ತನೆಯ ತರಗತಿಯ ಈ ಸಾಹಿತ್ಯದಲ್ಲಿ ಏಳು ಮತ್ತು ಎಂಟನೆಯ ತರಗತಿಯ ಅಪೇಕ್ಷಿತ ಕಲಿಕಾಫಲ ಹಾಗೂ ಕಲಿಕಾಂಶಗಳನ್ನು ಗಮನಿಸಿ ಚಟುವಟಿಕೆಗಳನ್ನು ರೂಪಿಸಲಾಗಿದೆ.
- ಈ ಸಾಹಿತ್ಯದಲ್ಲಿ ಅನೇಕ ಸಲಹಾತ್ಮಕ ಚಟುವಟಿಕೆಗಳನ್ನು ನೀಡಲಾಗಿದ್ದು ಶಿಕ್ಷಕರು ನಿರ್ವಹಿಸಬೇಕಾದ ಒಂದು ಚಟುವಟಿಕೆಯ ಬಗ್ಗೆ ವಿವರಣೆ ನೀಡಲಾಗಿದೆ. ಉಳಿದ ಚಟುವಟಿಕೆಗಳ ಹೆಸರುಗಳನ್ನು ಮಾತ್ರ ನೀಡಲಾಗಿದ್ದು ಶಿಕ್ಷಕರು ತಮಗೆ ಇಷ್ಟವಾದ ಚಟುವಟಿಕೆಗಳನ್ನು ಹೊಂದಾಣಿಕೆ ಮಾಡಿಕೊಳ್ಳಲು ತಿಳಿಸಿದೆ.

ಸೇತುಬಂಧ ಸಾಹಿತ್ಯ

ತರಗತಿ: 9 ವಿಷಯ: ಕನ್ನಡ (ದ್ವಿತೀಯಭಾಷೆ)

| ದಿನ | ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಗಳು |
|---|---|---|---|---|
| 1 | ಕಥೆ/ ಸಂಭಾಷಣೆ ಮತ್ತು ಹಾಡು/ಕವಿತೆಗಳನ್ನು ಆಲಿಸಿ ಅರ್ಥಮಾಡಿಕೊಳ್ಳುವರು | ಏಕಕಾಲದಲ್ಲಿ ಇಬ್ಬರು ಮಾತನಾಡುವುದನ್ನು ಆಲಿಸಿ ಅರ್ಥ ಮಾಡಿಕೊಳ್ಳುತ್ತಾರೆ | 1.1ಆಲಿಸು-ವಾಕ್ಯ ಜೋಡಿಸು<br>1.2 ಸಂದರ್ಶನ ಕೇಳಿ ಕವಿ ಪರಿಚಯ ಹೇಳಿ<br>1.3 ಸಂಭಾಷಣೆ ಕೇಳಿ- ಸಾರಾಂಶ ಹೇಳಿ | 1.1ವಿದ್ಯಾರ್ಥಿಯು ಒಂದು ವಾಕ್ಯವನ್ನು ಹೇಳುತ್ತಾನೆ. ಆ ವಾಕ್ಯವನ್ನು ಆಲಿಸಿ ಅದಕ್ಕೆ ಪೂರಕವಾದ ಮತ್ತೊಂದು ವಾಕ್ಯವನ್ನು ಮುಂದಿನ ವಿದ್ಯಾರ್ಥಿಯಿಂದ ಹೇಳಿಸಿ. ಹೀಗೆ ಚಟುವಟಿಕೆ ಮುಂದುವರೆಸಿ<br>1.2 ಸಂದರ್ಶನ ರೂಪದಲ್ಲಿ ಕವಿ ಪರಿಚಯ ಮಾಡಿಸಿ. ನಂತರ ಇತರ ಮಕ್ಕಳಿಂದ ಕವಿಪರಿಚಯ ಹೇಳಿಸಿ<br>1.3 ಕಿರುನಾಟಕದ ಸಂಭಾಷಣೆ ಕೇಳಿಸಿ ಸಾರಾಂಶ ಹೇಳಿಸಿ |
| 2 | | ಸರಳ ವಿಷಯಗಳನ್ನು ಆಲಿಸಿ ಅರ್್ಥ ಮಾಡಿಕೊಳ್ಳುತ್ತಾರೆ | 2.1 ಬಾನುಲಿ -ಕೇಳಿ ನಲಿ<br>2.2 ಕೇಳು-ಹೇಳು<br>2.3 ಸರಳ ವಚನ-ಸುಲಭ ಗಾಯನ | 2.1 ಆಕಾಶವಾಣಿಯಲ್ಲಿ ಪ್ರಸಾರವಾಗುವ 'ಕರುಣಾಳು ಬಾ ಬೆಳಕೆ' ರೀತಿಯ ಕಾರ್ಯಕ್ರಮದ ಧ್ವನಿಸುರುಳಿ ಕೇಳಿಸಿ. ಆಲಿಸಿದ ನಂತರ ಮುಖ್ಯಾಂಶಗಳನ್ನು ಹೇಳಿಸಿ<br>2.2 ಸರಳ ಜನಪ್ರಿಯ ಕವಿತೆಗಳನ್ನು ಧ್ವನಿಸುರುಳಿ ಮೂಲಕ ಕೇಳಿಸಿ. ಆಲಿಸಿದ ನಂತರ ಕವಿತೆಯನ್ನು ಹೇಳಲು ಸೂಚಿಸಿ |
| 3 | ನೀಡಿದ ನಿರ್ದೇಶನಗಳನ್ನು ಆಲಿಸಿ ಪಾಲಿಸಲು ಸಮರ್ಥರಾಗುವರು | ನೀಡಿದ ನಿರ್ದೇಶನಗಳನ್ನು ಆಲಿಸಿ ಕಾರ್ಯರೂಪಕ್ಕೆ ತರುತ್ತಾರೆ | 3.1ಚಾರ್ಟ್ ತಯಾರಿಕೆ<br>3.2 ನಡೆ ನಿಲ್ಲು ನುಡಿ<br>3.3 ಸಂಚಾರಿ ನಿಯಮಗಳ ಪಾಲನೆ | 3.1ವಿದ್ಯಾರ್ಥಿಗಳನ್ನು, ಗುಂಪುಗಳಾಗಿ ಮಾಡಿವರ್ಣಮಾಲೆ, ಜೋಡುನುಡಿ, ದ್ವಿರುಕ್ತಿ, ವರ್ಗೀಕರಣ, ವಿಭಕ್ತಿ ಪ್ರತ್ಯಯ ಸಂಬಂಧಿಸಿದ ಸೂಕ್ತ ನಿರ್ದೇಶನ ನೀಡಿ ಚಾರ್ಟ್ ತಯಾರು ಮಾಡಿಸಿ.ಕವಿ ಪರಿಚಯ, ವ್ಯಕ್ತಿ ಪರಿಚಯ ಚಾರ್ಟ್ ತಯಾರಿಸಲು ಶಿಕ್ಷಕರು ಸೂಕ್ತ ನಿರ್ದೇಶನಗಳನ್ನು ನೀಡಿ<br>3.2 ಶಿಕ್ಷಕರು ನಡೆ-ನಿಲ್ಲು-ನುಡಿ ಎಂದು ಹೇಳಿದ ತಕ್ಷಣ ವಿದ್ಯಾರ್ಥಿಗಳು ಅದರಂತೆ |

| | | | | |
|---|---|---|---|---|
| | | | | ಮಾಡಬೇಕು. ನಿಂತಾಗ ಶಿಕ್ಷಕರು ನುಡಿ ಎನ್ನಿ, ಆಗ ತಮ್ಮ ಎದುರಿಗೆ ನಿಂತಿರುವವರೊಂದಿಗೆ ಒಂದು ಸಂಧಿ ಪದವನ್ನು ಹಂಚಿಕೊಳ್ಳಲು ತಿಳಿಸಿ, ಚಟುವಟಿಕೆ ನಂತರ ಎಲ್ಲಾ ಪದಗಳನ್ನು ಪಟ್ಟಿಮಾಡಿಸಿ ಹಾಗೂ ವಿವಿಧ ಸಂಧಿಗಳನ್ನು ಗುರುತಿಸಿ  ವರ್ಗೀಕರಿಸಲು ಸೂಚಿಸಿ. |
| 4 | ಸನ್ನಿವೇಶ, ಘಟನೆ ಮತ್ತು ಪ್ರವಾಸ ಕಥನಗಳ ಕುರಿತು ವಿವರಣೆಯೊಂದಿಗೆ ನಿರರ್ಗಳವಾಗಿ ಮಾತನಾಡುವರು | ತಮ್ಮ ಅನುಭವಗಳನ್ನು ಮಾತಿನ ರೂಪದಲ್ಲಿ ಸಹಜವಾಗಿ ಅಭಿವ್ಯಕ್ತಿಸುತ್ತಾರೆ | 4.1 ಪ್ರವಾಸ ಸ್ವಾರಸ್ಯ<br>4.2 ನನ್ನ ಮಾತು ನನ್ನದು<br>4.3 ನಾ ಹೇಳ್ತೀನಿ ಕೇಳಿ<br>4.4 ನನ್ನ ದಿನಚರಿ | 4.1 ಮಕ್ಕಳು ತಾವು ಕೈಗೊಂಡ ಪ್ರವಾಸದ ಸ್ವಾರಸ್ಯಕರ ಸಂಗತಿಗಳ ಕುರಿತು ಮಾತನಾಡಲು ತಿಳಿಸಿ<br>4.2 ಶಾಲೆ, ಮನೆ, ಆಟದ ಮೈದಾನದಲ್ಲಿ ನಡೆದ ಸಂಗತಿಗಳ ಕುರಿತು ಮಾತನಾಡಲು ಸೂಚಿಸಿ<br>4.3 ತನಗೆ ಇಷ್ಟವಾದ ಯಾವುದಾದರೂ ವಿಚಾರದ ಕುರಿತು ತನ್ನ ಮಾತುಗಳಲ್ಲಿ ವಿವರಿಸಲು ಪ್ರೇರೇಪಿಸಿ. |
| 5 | | ಸನ್ನಿವೇಶ/ವಿಷಯ/ವಿಚಾರಗಳನ್ನು ಅರ್ಥೈಸಿಕೊಂಡು ಮಾತನಾಡುತ್ತಾರೆ | 5.1 ಚಿತ್ರನೋಡು – ಮಾತನಾಡು<br>5.2 ಚರ್ಚಾ ಸ್ಪರ್ಧೆ<br>5.3 ಶುಭನುಡಿ<br>5.4 ಹರಟೆ | 5.1ಬರಡು ಭೂಮಿ, ಹಳ್ಳಿ ಪರಿಸರ, ವಾಹನ ದಟ್ಟಣೆ ಇತ್ಯಾದಿ ವಿಚಾರಗಳನ್ನು ಬಿಂಬಿಸುವ ಚಿತ್ರಗಳನ್ನು ತೋರಿಸಿ ಸನ್ನಿವೇಶಕ್ಕೆ ಪೂರಕ ವಿಚಾರಗಳ ಕುರಿತು ಮಾತನಾಡುವಂತೆ ಪ್ರೇರೇಪಿಸಿ<br>5.3 ವಿದ್ಯಾರ್ಥಿಗಳೇ ಸಂಗ್ರಹಿಸಿ ತಂದ ಎರಡು/ಮೂರು ಸುಭಾಷಿತಗಳ ಅರ್ಥವನ್ನು ಹೇಳಲು ಅನುಕೂಲಿಸಿ.<br>5.4 ತರಗತಿ ಕೊಠಡಿಯೊಳಗೆ ಅರಳಿ ಕಟ್ಟೆ ವಾತಾವರಣವನ್ನು ಸೃಷ್ಟಿಸಿ ಅದರಲ್ಲಿ ಕೆಲವು ನಿರ್ದಿಷ್ಟ ವಿಷಯಗಳ ಕುರಿತು ಎರಡು ಗುಂಪಿನ ವಿದ್ಯಾರ್ಥಿಗಳಿಂದ ಪರವಿರೋಧವಾಗಿ ಮಾತನಾಡಿಸುವುದು.<br>ಉದಾ: ಬೆಲೆ ಏರಿಕೆ, ಲಾಕ್ ಡೌನ್ ಸಂದರ್ಭ, ಪ್ರವಾಹ ಪರಿಸ್ಥಿತಿ ಇತ್ಯಾದಿ |

| | | | | |
|---|---|---|---|---|
| 6 | ಗ್ರಹಿಸಿದ ವಿಷಯಗಳ ಕುರಿತು ವಿಸ್ತರಿಸಿ ಸ್ವತಂತ್ರವಾಗಿ ಮಾತನಾಡುವರು | ಗ್ರಹಿಸಿದ ವಿಚಾರಗಳನ್ನು ತನ್ನದೇ ಮಾತುಗಳಲ್ಲಿ ವಿವರಿಸುತ್ತಾರೆ | 6.1 ಪದ್ಯ ಕೇಳು-ಭಾವಾರ್ಥ ಹೇಳು<br>6.2 ಪುಸ್ತಕ ಪರಿಚಯ<br>6.3 ಕಥೆಯೊಂದಾ ಹೇಳುವೆ ನಾ…. | 6.1 ಸರಳವಾದ ಪದ್ಯಗಳನ್ನು ಸಂಗ್ರಹಿಸಿ ಹೇಳಿಸುವುದು. ನಂತರ ತಮ್ಮದೇ ಮಾತುಗಳಲ್ಲಿ ಪದ್ಯದ ಭಾವಾರ್ಥ ವಿವರಿಸುವಂತೆ ಸೂಚಿಸಿ.<br>6.2 ಶಿಕ್ಷಕರು, ವಿದ್ಯಾರ್ಥಿಯು ತನಗಿಷ್ಟವಾದ ಯಾವುದಾದರೂ ಒಂದು ಪುಸ್ತಕವನ್ನು ಅದರ ಮಹತ್ವ/ವಿಶೇಷತೆಯೊಂದಿಗೆ ಪರಿಚಯಿಸಲು ಅನುಕೂಲಿಸಿ. |
| 7 | | ಬಳಕೆಯಲ್ಲಿರುವ ಗಾದೆ ಮಾತುಗಳನ್ನು ವಿಸ್ತರಿಸಿ ಹೇಳುತ್ತಾರೆ | 7.1 ಸಂದರ್ಭಕ್ಕೊಂದು ಗಾದೆ<br>7.2 ಗಾದೆಗೊಂದು ಮಾತು<br>7.3 ಗಾದೆ ಕೇಳಿ-ಅರ್ಥ ಹೇಳಿ | 7.1ದೈನಂದಿನ ಜೀವನದಲ್ಲಿ ಬಳಕೆಯಲ್ಲಿರುವ ಗಾದೆಗಳನ್ನು ಪಟ್ಟಿ ಮಾಡಿಸುವುದು. ಯಾವ ಸಂದರ್ಭಕ್ಕೆ ಯಾವ ಗಾದೆ ಬಳಸಬಹುದು ಎಂಬುದನ್ನು ಆಲೋಚಿಸಿ ಹೇಳುವಂತೆ ತಿಳಿಸಿ<br>7.2 ಗಾದೆಗೆ ಅನ್ವಯವಾಗುವ ಘಟನೆ/ಕಥೆ /ಮತ್ತೊಂದು ಪೂರಕ ಗಾದೆಯನ್ನು ಹೇಳಿಸಿ |
| 8 | | ನಿರ್ದಿಷ್ಟ ವಿಷಯವನ್ನು ಕುರಿತು ಕಾಲ್ಪನಿಕವಾಗಿ ಮಾತನಾಡುತ್ತಾರೆ. | 8.1 ನಾನು ನನ್ನ ಕನಸು<br>8.2 ನನ್ನ ಕಲ್ಪನಾ ಲೋಕ<br>8.3 ನನ್ನ ಕನಸಿನ ಶಾಲೆ<br>8.4 ಕಥೆ ಕಟ್ಟೋಣ | 8.1ವಿದ್ಯಾರ್ಥಿಗಳು ತಾವು ಭವಿಷ್ಯದಲ್ಲಿ ಹೊಂದಿರುವ ಗುರಿಯನ್ನು ಕುರಿತು ಕಲ್ಪಿಸಿಕೊಂಡು ಮಾತನಾಡುವಂತೆ ಸೂಚಿಸಿ.<br>ಉದಾ: ನಾನು ಡಾಕ್ಟರ್ ಆಗುತ್ತೇನೆ, ನಾನು ಶಿಕ್ಷಕನಾಗುತ್ತೇನೆ.<br>8.2ವಿದ್ಯಾರ್ಥಿಗಳಿಗೆ ಕೆಲವು ನಿರ್ದಿಷ್ಟ ವಿಷಯಗಳನ್ನು ನೀಡಿ ಅವುಗಳ ಪರಿಣಾಮವನ್ನು ಕುರಿತು ಕಲ್ಪಿಸಿಕೊಂಡು ಮಾತನಾಡಲು ಸೂಚಿಸಿ<br>ಉದಾ: 1. ಪೆಟ್ರೋಲ್ – ಡಿಸೇಲ್ ದೊರೆಯದೆ ಹೋದರೆ?<br>2. ನಮ್ಮ ಶಾಲೆ ಹೇಗಿರಬೇಕು?<br>8.4 ಶಿಕ್ಷಕರು ಅರ್ಧ ಕಥೆ ಹೇಳಿ ಕಥೆಯ ಮುಂದಿನ ಭಾಗವನ್ನು ವಿದ್ಯಾರ್ಥಿಗಳು ತಮಗೆ ತೋಚಿದಂತೆ ಮುಂದುವರೆಸಲು ಸೂಚಿಸಿ. |

| | | | | |
|---|---|---|---|---|
| 9 | ಅಕ್ಷರಗಳ ಧ್ವನಿ ವ್ಯತ್ಯಾಸವನ್ನು ಅರ್ಥ ಮಾಡಿಕೊಂಡು ಓದುವುದನ್ನು ಕಲಿಯುವರು. | ಸ್ಪಷ್ಟ ಉಚ್ಚಾರಣೆಯ ಮೂಲಕ ಗದ್ಯ-ಪದ್ಯ ಸಾಹಿತ್ಯವನ್ನು ಸ್ವರಭಾರ ಸಹಿತವಾಗಿ ಓದುವರು. | 9.1 ಗದ್ಯ ವಾಚನ<br>9.2 ಪದ್ಯ ವಾಚನ<br>9.3 ಸಂಭಾಷಣೆ ಓದು | 9.1 ಹಿಂದಿನ ತರಗತಿಯ ಪಠ್ಯದ ಯಾವುದಾದರೂ ಒಂದು ಪಾಠಭಾಗವನ್ನು ಓದಿಸಿ ಉಚ್ಚಾರಣೆ ಸ್ಪಷ್ಟತೆಯನ್ನು ಗಮನಿಸಿ.<br>9.2 ಸರಳ ವಚನ, ಕೀರ್ತನೆ, ಜನಪದ ತ್ರಿಪದಿಗಳನ್ನು ಓದಿಸಿ.<br>9.3 ನಾಟಕಗಳ ಸಂಭಾಷಣೆಗಳನ್ನು ಸೂಕ್ತ ಧ್ವನಿ ಏರಿಳಿತದೊಂದಿಗೆ ಓದಿಸಿ. |
| 10 | | ವಿವಿಧ ಪದಗಳ ಉಚ್ಚಾರಣೆಯಲ್ಲಿರುವ ಧ್ವನಿ ವ್ಯತ್ಯಾಸವನ್ನು ಅರ್ಥ ಮಾಡಿಕೊಂಡು ಓದುತ್ತಾರೆ | 10.1ನನ್ನ ಧ್ವನಿ –ಏರಿಳಿತದ ಗಣಿ<br>10.2 ಧ್ವನಿಗೆ ತಕ್ಕ ಅರ್ಥ<br>10.3 ಅರ್ಥಕ್ಕೆ ತಕ್ಕ ವಾಕ್ಯ | 10.1 ಬಾನು-ಭಾನು, ಧಣಿ-ದನಿ, ಹಕ್ಕಿ-ಅಕ್ಕಿ ಇಂತಹ ಪದಗಳನ್ನು ಪಟ್ಟಿ ಮಾಡಿಸಿ. ಧ್ವನಿ ವ್ಯತ್ಯಾಸ ಗುರುತಿಸಿ ಓದಲು ತಿಳಿಸಿ.<br>10.2 ಅಕ್ಕಿಯನ್ನು ಕಂಡ ಹಕ್ಕಿ ಹಾರಿ ಬಂದಿತು, ಬಾನಿನಲ್ಲಿ ಭಾನು ಪ್ರಜ್ವಲಿಸುತ್ತಿದೆ, ದನದ ಬಳಿ ಧನವಿದ್ದರೆ ಏನು ಫಲ? ಏರು ದನಿಯಲ್ಲಿ ಕಿರುಚಾಡಿ ಮಕ್ಕಳು ದಣಿದರು ಇಂತಹ ವಾಕ್ಯಗಳನ್ನು ನೀಡಿ ಮಕ್ಕಳಿಂದ ಓದಿಸಿ.<br>10.3 ರಮೇಶನು ಅಣ್ಣನ್ನು ತಿಂದನು, ಹಾಡು ಹುಲ್ಲು ಮೇಯುತ್ತಿದೆ, ಇಂತಹ ವಾಕ್ಯಗಳನ್ನು ನೀಡಿ. ಈ ವಾಕ್ಯಗಳ ಸರಿಯಾದ ಅರ್ಥ ಗಮನಿಸಿ ಸರಿಪಡಿಸಿ ಓದಲು ಪ್ರೇರೇಪಿಸಿ |
| 11 | ಮುದ್ರಿತ ಪಠ್ಯೇತರ ವಿಷಯಗಳನ್ನು ಮತ್ತು ಕೈಬರೆಹವನ್ನು ನಿರರ್ಗಳವಾಗಿ ಓದುವರು. | ಪ್ರಸಿದ್ಧ ಕವಿಗಳ /ವ್ಯಕ್ತಿಗಳ ಕೈಬರೆಹಗಳನ್ನು ಗ್ರಹಿಸಿ ಓದುತ್ತಾರೆ. | 11.1ಕೈ ಬರೆಹ ಓದು<br>11.2 ಬಂಧುವಿನ ಬರೆಹ<br>11.3 ನನ್ನ ಬರೆಹ ನಾನೇ ಓದುವೆ | 11.1 ಕವಿಗಳ, ಪ್ರಸಿದ್ಧ ವ್ಯಕ್ತಿಗಳ ಕೈಬರೆಹ ಸಂಗ್ರಹಿಸಿ ಮಕ್ಕಳಿಗೆ ಓದಲು ನೀಡಿ. ಮಕ್ಕಳು ಕೈಬರೆಹ ಅರ್ಥ ಮಾಡಿಕೊಂಡು ಓದಲು ಪ್ರಯತ್ನಿಸುವಂತೆ ಪ್ರೇರೇಪಿಸಿ.<br>11.2ಮನೆಯ ಹಿರಿಯರ/ಪೋಷಕರ/ಸಂಬಂಧಿಕರ ಕೈಬರೆಹ ಸಂಗ್ರಹಿಸಿ ತಂದು ಓದಲು ತಿಳಿಸಿ. |
| 12 | | ಕೈ ಬರೆಹದಲ್ಲಿರುವ ಅಕ್ಷರ ಹಾಗೂ ಪದಗಳನ್ನು | 12.1 ಅದಲು ಬದಲು ಓದುವ ಮೊದಲು | 12.1 ಸಹಪಾಠಿಗಳ ಕೈಬರೆಹಗಳಲ್ಲಿನ ಲೋಪದೋಷಗಳನ್ನು ಗುರುತಿಸಿ ಸರಿಪಡಿಸಿ ಓದಲು ಸೂಚಿಸಿ. |

| | | | | |
|---|---|---|---|---|
| | | ಸರಿಯಾಗಿ ಗ್ರಹಿಸಿ ಸ್ಪಷ್ಟವಾಗಿ ಓದುತ್ತಾರೆ. | 12.2 ಓದು –ತಿದ್ದು-ಓದು<br>12.3 ಬರೆದು ಕಲಿ – ಓದಿ ತಿಳಿ | 12.2 ಶಿಕ್ಷಕರು ಹೇಳಿದ ವಾಕ್ಯವನ್ನು ಬರೆದುಕೊಂಡು ಮತ್ತೊಮ್ಮೆ ತಾನೇ ಓದಿ ತಪ್ಪು ತಿದ್ದಿಕೊಂಡು ಓದಲು ತಿಳಿಸಿ.<br>12.3 ಕಪ್ಪುಹಲಗೆಯಲ್ಲಿ ವಿದ್ಯಾರ್ಥಿಗಳಿಂದ ವಿವಿಧ ವಾಕ್ಯಗಳನ್ನು ಬರೆಸಿ. ಇತರ ವಿದ್ಯಾರ್ಥಿಗಳಿಂದ ಓದಿಸಿ |
| 13 | | ಮುದ್ರಿತ ವಿಷಯವನ್ನು ಓದಿ ಅರ್ಥೈಸಿಕೊಂಡು ಎಲ್ಲಿ? ಏಕೆ? ಹೇಗೆ? ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರಿಸುವರು | 13.1 ಮೌನ ಓದು<br>13.2 ಕಥೆ ಓದು – ಪ್ರಶ್ನೆ ರಚಿಸು<br>13.3 ಕರ ಪತ್ರ – ಓದು ಮಿತ್ರ<br>13.4 ಪತ್ರಿಕಾ ವಾಚನ | 13.1 ಹಿಂದಿನ ತರಗತಿಯ ಯಾವುದಾದರೂ ಪಾಠ ಭಾಗವನ್ನು ಎಲ್ಲಾ ವಿದ್ಯಾರ್ಥಿಗಳು ಮೌನವಾಗಿ ಓದಿಕೊಳ್ಳಲು ಸೂಚಿಸಿ. ಸರಳ ಪ್ರಶ್ನೆಗಳನ್ನು ರಚಿಸಲು ತಿಳಿಸಿ. ಆ ಪ್ರಶ್ನೆಗಳಿಗೆ ಇತರ ವಿದ್ಯಾರ್ಥಿಗಳಿಂದ ಉತ್ತರ ಹೇಳಿಸಿ.<br>13.2 ಮುದ್ರಿತ ಸಣ್ಣ ಸಣ್ಣ ಕಥೆಗಳನ್ನು ಓದಿಸಿ.ಸರಳ ಪ್ರಶ್ನೆಗಳನ್ನು ರಚಿಸಿ ಕೇಳಿ ಇತರ ವಿದ್ಯಾರ್ಥಿಗಳಿಂದ ಉತ್ತರ ಪಡೆಯುವಂತೆ ಸೂಚಿಸಿ |
| 14 | | ಪಠ್ಯೇತರ ವಿಷಯಗಳನ್ನು ಅರ್ಥಪೂರ್ಣವಾಗಿ ಓದುತ್ತಾರೆ ಹಾಗೂ ಲಯಬದ್ಧವಾಗಿ ಹಾಡುತ್ತಾರೆ. | 14.1ಹಾಡೊಂದ ನಾ ಹಾಡುವೆ.<br>14.2 ಸಮೂಹ ಗಾಯನ<br>14.3 ಭಿತ್ತಿ ಪತ್ರ ಓದುವೆ ಮಿತ್ರ<br>14.4 ಮದುವೆಯ ಕರೆಯೋಲೆ ಓದುವೆ | 14.1ಮಕ್ಕಳಿಂದ ನಿಯತಕಾಲಿಕೆ/ ವಾರಪತ್ರಿಕೆಗಳಲ್ಲಿ ಸಿಗಬಹುದಾದ ಶಿಶುಗೀತೆಗಳು, ಕವನಗಳನ್ನು ಸಂಗ್ರಹಿಸಲು ತಿಳಿಸಿ, ರಾಗಬದ್ಧವಾಗಿ ಹಾಡಿಸಿ.<br>14.2ಪುಸ್ತಕದಲ್ಲಿರುವ ಪದ್ಯಗಳನ್ನು ರಾಗಬದ್ಧವಾಗಿ ಹೇಳಿಕೊಟ್ಟು ಮಕ್ಕಳಿಂದ ಗುಂಪುಗಳಲ್ಲಿ ಹಾಡಿಸಿ. |
| 15 | ಲೇಖನ ಚಿಹ್ನೆಗಳನ್ನು ಅನುಸರಿಸಿ ಧ್ವನಿಯ | ಲೇಖನ ಚಿಹ್ನೆಗಳನ್ನು ಗಮನಿಸಿ ಸ್ವರಭಾರದೊಂದಿಗೆ | 15.1 ಹೊಂದಿಸಿ ಬರೆ<br>15.2 ಎಳೆ ಬಿಡಿಸಿ- ಚಿಹ್ನೆ | 15.1 ಮಿಂಚುಪಟ್ಟಿಗಳ ಮುಖಾಂತರ ಲೇಖನ ಚಿಹ್ನೆಗಳ ಪರಿಚಯ ಮಾಡಿಸುವುದು. ಲೇಖನ ಚಿಹ್ನೆಗಳ ಮಿಂಚುಪಟ್ಟಿ ನೀಡಿ ಅದನ್ನು ಲೇಖನ |

| | | | | |
|---|---|---|---|---|
| | ಪರಿಳಿತದೊಂದಿಗೆ ಸ್ಪಷ್ಟವಾಗಿ ಹಾಗೂ ನಿರರ್ಗಳವಾಗಿ ಓದುವರು. | ಓದುತ್ತಾರೆ. | ಸೇರಿಸಿ<br>15.3 ಚಿಹ್ನೆಗೆ ತಕ್ಕ ವಾಕ್ಯ<br>15.4 ವಾಕ್ಯ ರಚಿಸು ಲೇಖನ ಚಿಹ್ನೆ ಬಳಸು | ಚಿಹ್ನೆಗಳ ಹೆಸರಿರುವ ಮಿಂಚುಪಟ್ಟಿಯೊಂದಿಗೆ ಹೊಂದಿಸಲು ಹೇಳುವುದು<br>15.2 ಶಿಕ್ಷಕರು ಲೇಖನ ಚಿಹ್ನೆ ರಹಿತ ಒಂದು ಪ್ಯಾರಾವನ್ನು ಕಪ್ಪು ಹಲಗೆಯ ಮೇಲೆ ಬರೆಯುವುದು. ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸುವುದು. ಈಗಾಗಲೇ ಲೇಖನ ಚಿಹ್ನೆ ಬರೆದಿರುವ ಹಾಳೆಗಳಿಂದ ಸಿದ್ಧಪಡಿಸಿಕೊಂಡ ಎಲೆಕೋಸನ್ನು ವಿದ್ಯಾರ್ಥಿಗಳು ಒಬ್ಬರಿಂದ ಮತ್ತೊಬ್ಬರಿಗೆ ಸಾಗಿಸುತ್ತಾ ಶಿಕ್ಷಕರು ಚಪ್ಪಾಳೆ ತಟ್ಟಿದ ಕೂಡಲೇ ಎಲೆಕೋಸು ಹಿಡಿದಿರುವ ವಿದ್ಯಾರ್ಥಿಯು ಒಂದು ಎಲೆ ಬಿಡಿಸಿ ಅದರಲ್ಲಿ ದೊರೆಯುವ ಲೇಖನ ಚಿಹ್ನೆಯನ್ನು ಗಮನಿಸಿ ಕಪ್ಪು ಹಲಗೆಯ ಮೇಲೆ ಬರೆದಿರುವ ಪ್ಯಾರಾದಲ್ಲಿನ ಸೂಕ್ತ ಸ್ಥಳದಲ್ಲಿ ಆ ಲೇಖನ ಚಿಹ್ನೆಯನ್ನು ಬರೆಯಿಸಿ. ಅಂತಿಮವಾಗಿ ವಾಕ್ಯವೃಂದ ಓದಿಸಿ ಲೇಖನ ಚಿಹ್ನೆಗಳನ್ನೊಳಗೊಂಡ ವಾಕ್ಯವೃಂದವನ್ನು ಓದಿಸಿ.<br>15.3 ಶಿಕ್ಷಕರು ಒಂದು ಲೇಖನ ಚಿಹ್ನೆಯ ಹೆಸರು ಹೇಳಿದಾಗ ಮಕ್ಕಳು ಆ ಚಿಹ್ನೆ ಬಳಸಿರುವ ವಾಕ್ಯವನ್ನು ಪಾಠದಲ್ಲಿ ಹುಡುಕಿ ಓದಲು ಪ್ರೋತ್ಸಾಹಿಸಿ |
| 16 | | ನೀಡಿದ ವಾಕ್ಯಗಳಲ್ಲಿ ಲೇಖನ ಚಿಹ್ನೆ ಗಮನಿಸಿ ಭಾವಪೂರ್ಣವಾಗಿ ಸ್ವರಭಾರದೊಂದಿಗೆ ಓದುತ್ತಾರೆ. | 16.1 ಸಂಭಾಷಣೆ ಓದು- ಸ್ವಾರಸ್ಯ ತಿಳಿ<br>16.2 ಚಿಹ್ನೆ ಗಮನಿಸಿ ಓದು<br>16.3 ವಾಕ್ಯವೃಂದ ಓದು ಚೆಂದ | 16.1ನಾಟಕದ ಸಂಭಾಷಣೆಯನ್ನು ಪಾತ್ರಗಳ ಸನ್ನಿವೇಶಕ್ಕೆ ತಕ್ಕಂತೆ ಓದಲು ಸೂಚಿಸಿ.<br>16.2 ಹಿಂದಿನ ತರಗತಿಯ ಪಾಠದಲ್ಲಿ ಲೇಖನ ಚಿಹ್ನೆಗಳು ಹೆಚ್ಚು ಬಳಕೆಯಾಗಿರುವ ವಾಕ್ಯವೃಂದವನ್ನು ಗ್ರಹಿಸಿ ಅರ್ಥಪೂರ್ಣವಾಗಿ ಓದಲು ತಿಳಿಸುವುದು |
| 17 | ಜೀವನಕ್ಕೆ ಅಗತ್ಯವಿರುವ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳುವರು. | ನೀತಿಕಥೆ/ಜೀವನ ಚರಿತ್ರೆಯ ಪುಸ್ತಕಗಳನ್ನು ಓದಿ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ | 17.1 ಕಥೆ ಓದು- ಮೌಲ್ಯ ತಿಳಿ<br>17.2 ಸ್ಫೂರ್ತಿಯ ಕಿರಣ<br>17.3 ಹಿತ ನುಡಿ ಓದು | 17.1 ನೀತಿಕಥೆಗಳನ್ನು ಓದಿಸಿ. ಅವುಗಳು ಹೊಂದಿರುವ ಮೌಲ್ಯಗಳನ್ನು ಹೇಳಿಸಿ.<br>17.2 ಜೀವನ ಚರಿತ್ರೆ ಪುಸ್ತಕಗಳನ್ನು ಓದಿಸಿ. ಓದಿದ ನಂತರ ವ್ಯಕ್ತಿಯ ಮೆಚ್ಚಿದ ಅಂಶಗಳ ಕುರಿತು ಮಾತನಾಡಲು ಹೇಳಿ |

| | | | | |
|---|---|---|---|---|
| 18 | ಸರಳ ವಾಕ್ಯಗಳನ್ನು ಓದಿದ ಬಳಿಕ ವ್ಯಾಕರಣಾಂಶಗಳನ್ನು ಗುರುತಿಸುವರು | ವಾಕ್ಯವನ್ನು ಓದಿದ ನಂತರ ಕ್ರಿಯಾಪದವನ್ನು ಗುರುತಿಸುತ್ತಾರೆ | 18.1 ವಾಕ್ಯ ಓದು-ಕ್ರಿಯಾಪದ ಗುರುತಿಸು<br>18.2 ಒಂದು ವಾಕ್ಯ – ಹಲವು ಭಾಷಾಂಶ<br>18.3 ಪಾಠ ಓದು – ವ್ಯಾಕರಣಾಂಶ ಗುರುತಿಸು | 18.1 ಭಕ್ತರು ಪ್ರಾರ್ಥನಾ ಮಂದಿರಕ್ಕೆ ಬಂದರು<br>ಸರಸ್ವತಿ ಪಾಠವನ್ನು ಓದಿದಳು<br>ಶಾಲಾ ಘಂಟೆ ಬಾರಿಸಿತು - ಈ ರೀತಿಯ ವಾಕ್ಯಗಳನ್ನು ನೀಡಿ ಮಕ್ಕಳಿಂದ ಓದಿಸಿ ಕ್ರಿಯಾಪದ ಗುರುತಿಸಲು ಹೇಳಿ<br>18.2 ವಾಕ್ಯಗಳ ಚೀಟಿಗಳನ್ನು ಡಬ್ಬದಲ್ಲಿಡುವುದು. ಪ್ರತಿ ಮಗುವೂ ಒಂದೊಂದು ಚೀಟಿ ತೆಗೆದುಕೊಂಡು ಆ ವಾಕ್ಯದಲ್ಲಿರುವ ವ್ಯಾಕರಣಾಂಶಗಳನ್ನು ಹೆಸರಿಸಲು ಸೂಚಿಸಿ. ಉದಾಹರಣೆಗೆ ರಮೇಶನು ಮನೆಯಿಂದ ಶಾಲೆಗೆ ಬಂದನು. ರಮೇಶ – ನಾಮಪದ ಶಾಲೆಯಿಂದ- ಇಂದ ತೃತೀಯಾ ವಿಭಕ್ತಿ, ಆಗಮ ಸಂಧಿ, ಬಂದನು -ಕ್ರಿಯಾಪದ |
| 19 | ಗ್ರಹಿಸಿದ ಪದ ಹಾಗೂ ವಾಕ್ಯಗಳನ್ನು ಸರಿಯಾದ ಕ್ರಮದಲ್ಲಿ ಬರೆಯುವುದು. | ಪದಗಳನ್ನು ಒಂದೇ ಗಾತ್ರದಲ್ಲಿ ತಪ್ಪಿಲ್ಲದೆ ಸ್ಪಷ್ಟವಾಗಿ ಬರೆಯುತ್ತಾರೆ. | 19.1 ಉಕ್ತಲೇಖನ<br>19.2 ನಿನ್ನ ಚಿತ್ರ-ಸುತ್ತಮುತ್ತ<br>19.3 ಪದ ಬಂಡಿ<br>19.4 ದಿನಬಳಕೆಯ ವಸ್ತುಗಳ ಪಟ್ಟಿ | 19.1 ಮೂರು ಅಥವಾ ಮೂರಕ್ಕಿಂತ ಹೆಚ್ಚು ಅಕ್ಷರಗಳಿರುವ ಒತ್ತಕ್ಷರದಿಂದ ಕೂಡಿದ ಕ್ಲಿಷ್ಟ ಪದಗಳನ್ನು ಉಕ್ತಲೇಖನ ಬರೆಸಿ.<br>19.2 ಸುತ್ತಮುತ್ತ ಕಾಣ ಸಿಗುವ ವಸ್ತುಗಳ ಹೆಸರು ಪಟ್ಟಿ ಮಾಡಿಸಿ<br>19.3 ಒಬ್ಬೊಬ್ಬರಿಂದ ಒಂದೊಂದು ಪದ ಹೇಳಿಸಿ ಬರೆದುಕೊಳ್ಳಲು ತಿಳಿಸಿ. |
| 20 | | ವಾಕ್ಯದಲ್ಲಿ ಪದಗಳ ನಡುವೆ ಸೂಕ್ತ ಸ್ಥಳ ಬಿಟ್ಟು ತಪ್ಪಿಲ್ಲದೆ ಸ್ಪಷ್ಟವಾಗಿ ಹಾಗೂ ನೇರವಾಗಿ | 20.1ನಕಲು ಮಾಡು<br>20.2 ಓಲೆ-ಕರೆಯೋಲೆ<br>20.3 ಆಶಯ-ಶುಭಾಶಯ<br>20.4 ಪದಕ್ಕೊಂದು ವಾಕ್ಯ | 20.1 ದಿನಪತ್ರಿಕೆಯ ಬರೆಹಗಳಿಂದ ವಾಕ್ಯಗಳನ್ನು ನಕಲು ಮಾಡಿಸಿ.<br>20.2 ಆಮಂತ್ರಣ ಪತ್ರಿಕೆ ತಯಾರಿಸಲು ಸೂಕ್ತ ಮಾರ್ಗದರ್ಶನ ನೀಡಿ.<br>20.3 ಶುಭಾಶಯ ಪತ್ರ ರಚಿಸಲು ಸೂಕ್ತ ಮಾರ್ಗದರ್ಶನ ನೀಡಿ. |

| | | | | |
|---|---|---|---|---|
| | | ಬರೆಯುತ್ತಾರೆ. | | |
| 21 | | ಸಜಾತೀಯ ಮತ್ತು ವಿಜಾತೀಯ ಒತ್ತಕ್ಷರಗಳನ್ನು ಗುರುತಿಸುತ್ತಾರೆ. | 21.1ಒತ್ತಕ್ಷರ ಪದಗಳ ವರ್ಗೀಕರಣ<br>21.2 ಪದ ಹುಡುಕು<br>21.3 ವಾಕ್ಯದಲ್ಲಿ ಒತ್ತಕ್ಷರ | 21.1 ಒತ್ತಕ್ಷರ ಪದಗಳನ್ನು ಪಟ್ಟಿ ಮಾಡಿಸಿ ಸಜಾತಿ, ವಿಜಾತಿ ಒತ್ತಕ್ಷರ ಪದಗಳಾಗಿ ವರ್ಗೀಕರಿಸಿ ಬರೆಸಿ.<br>21.2 ಸುತ್ತಮುತ್ತಲಿನ ವಸ್ತು, ವಿಷಯ, ಹೆಸರುಗಳಲ್ಲಿ ಒತ್ತಕ್ಷರ ಹೊಂದಿರುವ ಪದಗಳನ್ನು ಮಾತ್ರ ಪಟ್ಟಿ ಮಾಡಲು ಹೇಳಿ<br>21.3 ಮಕ್ಕಳು ಒತ್ತಕ್ಷರ ಒಳಗೊಂಡ ಸರಳ ವಾಕ್ಯಗಳನ್ನು ರಚಿಸುವಂತೆ ಪ್ರೇರೇಪಿಸಿ |
| 22 | ಭಾಷೆಯನ್ನು ಜೀವನದ ವಿವಿಧ ಸಂದರ್ಭಗಳಲ್ಲಿವ್ಯವಹಾರಿಕವಾಗಿ ಲಿಖಿತವಾಗಿ ಬಳಸುವರು. | ವಿವಿಧ ಮಾದರಿಯ ಪದ ಬಳಸಿಕೊಂಡು ಅರ್ಥಪೂರ್ಣವಾಕ್ಯಗಳನ್ನು ರಚಿಸುತ್ತಾರೆ. | 22.1 ನುಡಿಗಟ್ಟು – ವಾಕ್ಯ ಕಟ್ಟು<br>22.2 ಒಂದು ವಾಕ್ಯ ಹಲವು ನಾಮಪದ<br>22.3 ಏಕವಚನ-ಬಹುವಚನ | 22.1 ಶಿಕ್ಷಕರು ಸರಳವಾದ ನುಡಿಗಟ್ಟುಗಳ ಮಿಂಚುಪಟ್ಟಿಗಳನ್ನು ವಿದ್ಯಾರ್ಥಿಗಳಿಗೆ ನೀಡಿ ಅವರಿಗೆ ಬಂದಿರುವ ನುಡಿಗಟ್ಟಿಗೆ ಸಂಬಂಧಿಸಿದಂತೆ ವಾಕ್ಯಗಳನ್ನು ಬರೆಯಲು ಸೂಚಿಸಿ. ಉದಾ: ತಲೆನೋವು, ಕಣ್ಣುರಿ, ಹೊಟ್ಟೆಕಿಚ್ಚು ಮುಂತಾದ ಸರಳ ನುಡಿಗಟ್ಟುಗಳು.<br>22.2 ಸತೀಶನು ಒಂದು ದಿನ ಪೂರ್ವದಿಕ್ಕಿನಲ್ಲಿರುವ ಕಾಡಿಗೆ ಹೋಗುತ್ತಿದ್ದನು. ಈ ರೀತಿಯ ವಾಕ್ಯ ರಚನೆಗೆ ಪ್ರೋತ್ಸಾಹಿಸಿ<br>22.3 ಮಕ್ಕಳನ್ನು ಎರಡು ಗುಂಪುಗಳಾಗಿ ಮಾಡಿ ಒಂದು ಗುಂಪು ಏಕವಚನ ಬಳಸಿ ವಾಕ್ಯ ರಚಿಸಲಿ. ಆ ವಾಕ್ಯವನ್ನು ಮತ್ತೊಂದು ಗುಂಪು ಬಹುವಚನಕ್ಕೆ ಬದಲಿಸಿ ಬರೆಯಲು ಪ್ರೇರೇಪಿಸಿ.ಉದಾ ದಟ್ಟ ಕಾಡಿನಲ್ಲಿ ಜಿಂಕೆ ಮೇಯುತ್ತಿತ್ತು- ದಟ್ಟ ಕಾಡಿನಲ್ಲಿ ಜಿಂಕೆಗಳು ಮೇಯುತ್ತಿದ್ದವು( ಯಾವ ಪದಕ್ಕೆ ವಚನ ಬದಲಿಸಬೇಕೋ ಆ ಪದಕ್ಕೆ ಅಡಿ ಗೆರೆ ಹಾಕಲು ಸೂಚಿಸಿ) |
| 23 | | ಸರಳ ವಿಷಯಗಳ ಅರ್ಥವನ್ನು | 23.1ಗಾದೆ ಹುಡುಕು | 23.1 ಗಾದೆಮಾತುಗಳ ಪದಗಳನ್ನು ಬರೆದು ಕತ್ತರಿಸಿ ಡಬ್ಬದಲ್ಲಿ ಹಾಕಿ. ಮಕ್ಕಳು |

| | | | | |
|---|---|---|---|---|
| | | ವಿಸ್ತರಿಸಿ ಸ್ವಂತ ವಾಕ್ಯಗಳಲ್ಲಿ ಬರೆಯುತ್ತಾರೆ | 23.2ಗಾದೆ ವಿಸ್ತರಣೆ<br>23.3 ಕಥೆ ಓದು ಸಂಭಾಷಣೆ ರಚಿಸು<br>23.4. ನಾಟಕ ಕಥೆಯಾದಾಗ | ಪದಗಳನ್ನು ಜೋಡಿಸಿ ಸೂಕ್ತ ಗಾದೆಗಳನ್ನು ರಚಿಸಿ ಬರೆಯಲು ಅನುಕೂಲಿಸಿ<br>23.2 ಪರಿಚಿತ ಗಾದೆ ಮಾತುಗಳನ್ನು ಸಂಗ್ರಹಿಸಿ ಬರೆಯಲು ತಿಳಿಸಿ. ಸಂಗ್ರಹಿಸಿದ ಗಾದೆಗಳಲ್ಲಿ ಯಾವುದಾದರೂ ಒಂದು ಗಾದೆಯನ್ನು ವಿಸ್ತರಿಸಿ ಬರೆಯಲು ಹೇಳಿ. |
| 24 | | ತಮ್ಮ ಅನುಭವಗಳನ್ನು ಕುರಿತು ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಿ ಟಿಪ್ಪಣಿ ಬರೆದು ಶೀರ್ಷಿಕೆಯನ್ನು ನೀಡುತ್ತಾರೆ. | 24.1ಅನುಭವ-ಅಭಿವ್ಯಕ್ತಿ<br>24.2 ಬಸ್ಸು ಪ್ರಯಾಣದ ಕಥೆ<br>24.3 ಕಂಡ ಕನಸು ಬರೆವ ಮನಸ್ಸು | 24.1 ವಿದ್ಯಾರ್ಥಿಯು ತಾನು ಕೈಗೊಂಡ ಪ್ರವಾಸದ ಅನುಭವಗಳನ್ನು ಬರೆದು ಅದಕ್ಕೊಂದು ಹೆಸರು ನೀಡಲು ತಿಳಿಸಿ.<br>24.2 ಪ್ರತಿನಿತ್ಯ ಬಸ್ಸಿನಲ್ಲಿ ಓಡಾಡುವಾಗ ಆದ ಅನುಭವಗಳನ್ನು ಬರೆಹ ರೂಪದಲ್ಲಿ ವ್ಯಕ್ತಪಡಿಸಲು ಹೇಳಿ. |
| 25 | | ಪರಿಚಿತ ವಿಷಯಗಳ ಬಗ್ಗೆ ಟಿಪ್ಪಣಿ/ ಪ್ರಬಂಧವನ್ನು ರಚಿಸುತ್ತಾರೆ. | 25.1 ಚಿತ್ರಕ್ಕೊಂದು ಟಿಪ್ಪಣಿ<br>25.2 ಪ್ರಬಂಧ ಬರೆಹ<br>25.3 ನಾನು ನೋಡಿದ ಜಾತ್ರೆ<br>25.6 ನಮ್ಮೂರ ವಿಶೇಷ | 25.1 ವಿವಿಧ ಸನ್ನಿವೇಶಗಳ ಚಿತ್ರ ನೋಡಿ ಲಘುಟಿಪ್ಪಣಿ ಬರೆಯಲು ಸೂಚಿಸಿ<br>25.2ನೀರಿನ ಸಂರಕ್ಷಣೆ, ಮೊಬೈಲ್ ಬಳಕೆ, ಕ್ರೀಡೆಗಳು ಮುಂತಾದ ಸರಳ ವಿಷಯಗಳನ್ನು ಆಧರಿಸಿ ಪ್ರಬಂಧ ಬರೆಸಿ.ಪ್ರಬಂಧದ ನಿಯಮಗಳನ್ನು ಅನ್ವಯಿಸಿ ಬರೆಯಲು ಸೂಕ್ತ ಮಾರ್ಗದರ್ಶನ ನೀಡಿ. |
| 26 | ರಜೆ ಪತ್ರ ವ್ಯವಹಾರಿಕ ಪತ್ರಗಳ ರಚನಾ ವಿನ್ಯಾಸ ಮತ್ತು ಸಾಮಾನ್ಯ ಹಂತಗಳನ್ನು ತಿಳಿಯುವರು. | ಪತ್ರಲೇಖನದ ಹಂತಗಳಿಗನುಗುಣವಾಗಿ ಪತ್ರವನ್ನು ಬರೆಯುತ್ತಾರೆ. | 26.1ಪತ್ರಲೇಖನ<br>26.2 ಗೆಳೆಯರಿಗೊಂದು ಪತ್ರ<br>26.3 ಅಂಚೆ ಪತ್ರ-ಬರೆಯುವೆ ಮಿತ್ರ | 26.1 ಪತ್ರಲೇಖನದ ವಿವಿಧ ಹಂತಗಳನ್ನು ಮಾದರಿಗಳ ಮುಖಾಂತರ ಪರಿಚಯಿಸಿ..<br>ಗ್ರಾಮಪಂಚಾಯಿತಿ ಅಧ್ಯಕ್ಷರು, ಮುಖ್ಯಶಿಕ್ಷಕರು, ಪುರಸಭೆಯ ಅಧ್ಯಕ್ಷರು, ಮುಂತಾದವರಿಗೆ ಸೂಕ್ತ ಕಾರಣಗಳಿಗಾಗಿ ಪತ್ರ ಬರೆಸುವುದು. ಉದಾಹರಣೆಗೆ ಕಸದ ಸಮಸ್ಯೆ ಬಗೆಹರಿಸುವಂತೆ ಕೋರಿ ಗ್ರಾಮಪಂಚಾಯಿತಿ ಅಧ್ಯಕ್ಷರಿಗೆ ಪತ್ರ |

| | | | | |
|---|---|---|---|---|
| | | | | ಬರೆಯಿರಿ.<br>26.2 ವೈಯಕ್ತಿಕ ಪತ್ರ ಬರೆಯುವಾಗ ಬಳಸಬೇಕಾದ ಸಂಭೋದನೆ ತಿಳಿಸಿ ಊರಹಬ್ಬ, ಶಾಲೆಯ ಕಾರ್ಯಕ್ರಮ ಕುರಿತು ಗೆಳೆಯರಿಗೆ ಪತ್ರ ಬರೆಯಲು ತಿಳಿಸಿ<br>26.3 ಅಂಚೆ ಕಾರ್ಡ್, ಇನ್ ಲ್ಯಾಂಡ್ ಪತ್ರ ಬಳಸಿ ಪತ್ರ ರಚಿಸಲು ತಿಳಿಸಿ. |
| 27 | ಭಾಷಾಂಶ ಮತ್ತು ವ್ಯಾಕರಣಾಂಶಗಳನ್ನು ತಿಳಿಯುವರು. | ನಾಮಪದಗಳನ್ನು ಗುರುತಿಸಿ ಅರ್ಥೈಸಿಕೊಳ್ಳುತ್ತಾರೆ. | 27.1 ನಾನು ಯಾರು? ನೀವು ಹೇಳಿ<br>27.2 ಅಡಗಿರುವೆ ನಾನು, ಹುಡುಕಬಲ್ಲೆಯ ನೀನು?<br>27.3 ನಾಮಪದ ಬಳಸು ವಾಕ್ಯ ರಚಿಸು<br>27.4 ಪಾಠ ಓದು ನಾಮಪದ ಬರೆ | 27.1 ಶಿಕ್ಷಕರು ರೂಢನಾಮ, ಅನ್ವರ್ಥನಾಮ, ಅಂಕಿತನಾಮ ಪದಗಳಿಗೆ ಸಂಬಂಧಿಸಿದ ಚಿತ್ರಗಳನ್ನು ವಿದ್ಯಾರ್ಥಿಗಳಿಗೆ ನೀಡಿ ಅವುಗಳನ್ನು ಗುರುತಿಸಿ ಬರೆಯುವಂತೆ ತಿಳಿಸಿ.<br>ಉದಾ: ರೈತ, ಕುವೆಂಪು, ನದಿ, ಹಿಮಾಲಯ ಪರ್ವತ, ಶಿಕ್ಷಕ, ವೈದ್ಯ ಮುಂತಾದ ಚಿತ್ರಗಳು.<br>27.2ಶಿಕ್ಷಕರು ನಾಮಪದಗಳ ಪ್ರಕಾರಗಳ ಉದಾಹರಣೆಯ ಪದಗಳನ್ನು ರಚಿಸಬಹುದಾದ ಅಕ್ಷರಬಂಧಗಳನ್ನು ತಯಾರಿಸಿ, ವಿದ್ಯಾರ್ಥಿಗಳ ಗುಂಪಿಗೆ ನೀಡಿ ಅದರಲ್ಲಿ ಅಡಗಿರುವ ಪದಗಳನ್ನು ಹುಡುಕಲು ಸೂಚಿಸಿ.ಮಾದರಿ: |

| | | | | | | | | | |
|---|---|---|---|---|---|---|---|---|---|
| ಬೆಂ | ಸ | ಯಾ | ಅ | ಹೊ | ಹಿ | ಮಾ | ಲ | ಯ | ಮ |
| ಗ | ಣ | ನೀ | ನು | ಕಿ | ಆ | ಟೋ | ವ | ಕೀ | ಲ |
| ಳೂ | ಲಿ | ರೈ | ಬೆ | ಕೆಂ | ಟ | ಬ | ಡ | ಗ | ಣ |
| ರು | ಟ್ಟ | ಳಿ | ಟ್ಟ | ಪು | ರಾ | ಮ | ನ್ರ | ಬಿ | ನಾ |
| ತ್ಯ | ಝು | ಮ | ಈ | ವಿ | ಗ್ರಾ | ಷ್ಟ | ರ್ಶ | ಳಿ | ನು |
| ಪ | ರ್ವ | ತ | ಗು | ಫ | ಐಂ | ಅ | ನೀ | ಯ | ಮ |
| ಪೂ | ರ್ವ | ನಾ | ವು | ಶಿ | ಕ್ಷ | ಕ | ತ್ಸ | ಐ | ದು |

| | | | | |
|---|---|---|---|---|
| | | | | |
| 28 | | ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ಅರ್ಥೈಸಿಕೊಳ್ಳುತ್ತಾರೆ. | 28.1ಪ್ರಕೃತಿಗೆ ಪ್ರತ್ಯಯ<br>28.2ಪ್ರತ್ಯಯ ಹಚ್ಚು - ವಾಕ್ಯ ರಚಿಸು<br>28.3 ಬಳಸಿ ನಿನ್ನ ಯುಕ್ತಿ- ಗುರುತಿಸು ವಿಭಕ್ತಿ | 28.1 ವಿಭಕ್ತಿ ಪ್ರತ್ಯಯದ ಚಾರ್ಟ್ ನೀಡಿ ಅದರ ಸಹಾಯದಿಂದ ನಾಮಪ್ರಕೃತಿಗೆ ಪ್ರತ್ಯಯಗಳನ್ನು ಹಚ್ಚಲು ಸೂಚಿಸಿ<br>28.2 ನಾಮಪ್ರಕೃತಿಗೆ ವಿಭಕ್ತಿ ಪ್ರತ್ಯಯಗಳನ್ನು ಹಚ್ಚಿ ಅರ್ಥಪೂರ್ಣ ವಾಕ್ಯ ರಚಿಸಲು ಮಾರ್ಗದರ್ಶನ ನೀಡಿ. ಉದಾಹರಣೆಗೆ<br>ರಾಮ ಕಾಡು ಹೋದನು- ರಾಮನು ಕಾಡಿಗೆ ಹೋದನು.<br>ನಾನು ಮನೆ ಶಾಲೆ ಹೋಗುತ್ತೇನೆ- ನಾನು ಮನೆಯಿಂದ ಶಾಲೆಗೆ ಹೋಗುತ್ತೇನೆ<br>28.3 ನಿದಿ□ಷ್ಟ ಪಾಠಭಾಗವನ್ನು ಓದಿಕೊಂಡು ವಿಭಕ್ತಿ ಪ್ರತ್ಯಯಗಳಿರುವ ಪದಗಳನ್ನು ಗುರುತಿಸಿ ಬರೆಯಲು ತಿಳಿಸಿ |
| 29 | | ಅನುಕರಣಾವ್ಯಯ, ದ್ವಿರುಕ್ತಿ, ಜೋಡುನುಡಿಗಳ ನಡುವಿನ ವ್ಯತ್ಯಾಸ ಅರಿಯುತ್ತಾರೆ | 29.1ಉಲಿ-ನಲಿ<br>29.2ಚಾರ್ಟ್ ತಯಾರಿಕೆ<br>29.3 ಪದ ವರ್ಗೀಕರಣ | 29.1 ವಿವಿಧ ಪ್ರಾಣಿ/ಪಕ್ಷಿಗಳ ಧ್ವನಿಯನ್ನೊಳಗೊಂಡ ಆಡಿಯೋವನ್ನು ಕೇಳಿಸಿ. ಪ್ರಾಣಿ ಪಕ್ಷಿಗಳ ಧ್ವನಿ ಅನುಕರಿಸಲು ಹೇಳುವುದು. ಧ್ವನಿಗೆ ತಕ್ಕ ಬರೆಹ ರೂಪ ನೀಡಿ.<br>ಉದಾ: ಕೋಗಿಲೆಯ ಕೂಗು ಕುಹೂ ಕುಹೂ, ಪಕ್ಷಿಗಳ ಧ್ವನಿ ಚಿಲಿಪಿಲಿ ಹೀಗೆ ಎಲ್ಲಾ ಪದಗಳನ್ನು ಪಟ್ಟಿ ಮಾಡಿ ಅನುಕರಣಾವ್ಯಯವನ್ನು ಅರ್ಥೈಸಿ.<br>29.2 ಅನುಕರಣಾವ್ಯಯ, ಜೋಡುನುಡಿ, ದ್ವಿರುಕ್ತಿ ಪದಗಳನ್ನು ಪಟ್ಟಿ ಮಾಡಿ ಚಾರ್ಟ್ ತಯಾರಿಸಲು ಹೇಳಿ.<br>29.3 ಅನುಕರಣಾವ್ಯಯ,ಜೋಡುನುಡಿ,ದ್ವಿರುಕ್ತಿ ಪದಗಳ ಮಿಂಚುಪಟ್ಟಿ ತಯಾರಿಸಿ ಡಬ್ಬದಲ್ಲಿ ಹಾಕುವುದು. ವಿದ್ಯಾರ್ಥಿಯು ತನಗೆ ಸಿಕ್ಕ ಮಿಂಚುಪಟ್ಟಿ ಓದಿ ವರ್ಗೀಕರಿಸಲು ಸೂಚಿಸಿ.ಉದಾಹರಣೆಗೆ ಬೆಟ್ಟಗುಡ್ಡ – ಇದು ಜೋಡುನುಡಿ ಎಂದು ಮಗು ಓದಿ ಕಪ್ಪು ಹಲಗೆ ಮೇಲೆ ಜೋಡುನುಡಿ ಪಟ್ಟಿಯ ಕೆಳಗೆ ಬರೆಯುವನು |
| 30 | | ಸಂಧಿ ಪದ ಬಿಡಿಸಿ ಸಂಧಿಯ | 30.1ಬಿಡಿಸಿ-ಹೆಸರಿಸಿ | 30.1ಕನ್ನಡ ಸಂಧಿಪದಗಳನ್ನು ಒಳಗೊಂಡ ಮಿಂಚುಪಟ್ಟಿಗಳನ್ನು ಮಕ್ಕಳಿಗೆ |

| | | | | |
|---|---|---|---|---|
| | | ಹೆಸರು ತಿಳಿಸುವರು | 30.2 ನಮ್ಮನ್ನು ಹುಡುಕಿ<br>30.3 ಸಂಧಿ ಪದ ವರ್ಗೀಕರಣ | ನೀಡಿ. ಮಿಂಚುಪಟ್ಟಿಯ ಹಿಂಭಾಗದಲ್ಲಿ ಪದವನ್ನು ಬಿಡಿಸಿ. ಸಂಧಿಯ ಹೆಸರು ಬರೆಯಲು ಸೂಚಿಸಿ.<br>30.2ಸಂಧಿ ಪದಗಳುಳ್ಳ ಗದ್ಯಭಾಗವೊಂದನ್ನು ನೀಡಿ ಅದರಲ್ಲಿರುವ ಸಂಧಿ ಪದಗಳನ್ನು ಗುರುತಿಸಿ ಬರೆದು, ಸಂಧಿ ಹೆಸರಿಸಲು ಸೂಚಿಸಿ.<br>30.3 ಲೋಪ, ಆಗಮ, ಆದೇಶ ಸಂಧಿ ಪದಗಳ ಚೀಟಿಯನ್ನು ಡಬ್ಬದಲ್ಲಿ ಹಾಕಿ. ಮಕ್ಕಳನ್ನು ಕರೆದು ಒಂದೊಂದೇ ಚೀಟಿ ತೆಗೆದು ಸಂಧಿಯನ್ನು ಗುರುತಿಸಿ ಕಪ್ಪು ಹಲಗೆಯ ಮೇಲೆ ವರ್ಗೀಕರಿಸಿ ಬರೆಯಲು ತಿಳಿಸಿ |